**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ,**
**ನೃಪತುಂಗರಸ್ತೆ, ಬೆಂಗಳೂರು-1**

ಸಂಖ್ಯೆ: E-gov Aadhaar/2015-16 ದಿನಾಂಕ: 31.10.2015

**ಅಧಿಕೃತ ಜ್ಞಾಪನಾ**

**ವಿಷಯ:-** ಜಿಲ್ಲೆಗಳ ಪ್ರತಿಯೊಂದು ಶಾಲೆಯ ಮಕ್ಕಳಿಂದ ಆಧಾರ್ ಮಾಹಿತಿ ಪಡೆಯಲು ಕ್ರಮ ವಹಿಸುವ ಬಗ್ಗೆ.

**ಉಲ್ಲೇಖ:-** 1. ಸಂಖ್ಯೆ:ಸಶಿಅ/ಆ/ಸಿ1-ಯು-ಡೈಸ್.ಮಾ-31/2015-16, ದಿನಾಂಕ:26.09.2015.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಪಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರ, ಇವರು ದಿನಾಂಕ 28.10.2015 ರಂದು ರಾಜ್ಯಮಟ್ಟದ ವಿಡಿಯೋ ಕಾನ್‌ಫರೆನ್ಸ್ ಪ್ರಗತಿ ಪರಿಶೀಲನೆಯಲ್ಲಿ ನೀಡಿದ ಸೂಚನೆಯ ಮೇರೆಗೆ.

- ❖ ರಾಜ್ಯದ ಎಲ್ಲಾ ಶಾಲೆಗಳಲ್ಲಿನ ಮಕ್ಕಳ ಆಧಾರ್ ಸಂಖ್ಯೆ ಮಾಹಿತಿ ಪಡೆಯಲು ಸರ್ಕಾರದ ವತಿಯಿಂದ ನಿರ್ದೇಶನ ನೀಡಿದ್ದು ಇದರ ಅನ್ವಯ ಆಧಾರ ಕಾರ್ಡ್ ಹೊಂದಿದ್ದ ಮಕ್ಕಳ ಮಾಹಿತಿಯನ್ನು ಉಪನಿರ್ದೇಶಕರುಗಳು ರಾಜ್ಯ ಕಛೇರಿಗೆ ಸಲ್ಲಿಸಿರುತ್ತಾರೆ.
- ❖ ಆದರೆ ರಾಜ್ಯದಲ್ಲಿ 5 ರಿಂದ 17 ವಯಸ್ಸಿನ ಮಕ್ಕಳಿಗೆ ನೀಡಿದ್ದ ಆಧಾರ್ ಸಂಖ್ಯೆಯ ಮಾಹಿತಿಯನ್ನು UIDAI ಸಂಸ್ಥೆಯವರಿಂದ ಪಡೆದು ದತ್ತಾಂಶವನ್ನು ಅವಲೋಕಿಸಿದಾಗ ಆಧಾರ ಕಾರ್ಡ್ ಹೊಂದಿರುವ ಹಾಗೂ ಆಧಾರ್ ಕಾರ್ಡ್‌ಗಾಗಿ ರಿಜಿಸ್ಟ್ರೇಷನ್ ಮಾಡಿ ಸದರಿ ಕಾರ್ಡ್‌ನ್ನು ಆಧಾರ್ ಸಂಸ್ಥೆಯಿಂದ ಪಡೆಯಲು ಕಾಯುತ್ತಿರುವ ಬಹಳಷ್ಟು ಮಕ್ಕಳ ಮಾಹಿತಿಯನ್ನು ಇನ್ನೂ ಪಡೆಯಬೇಕಿದೆ ಎಂದು ಸರ್ಕಾರಕ್ಕೆ ಮನವರಿಕೆಯಾಗಿದೆ.
- ❖ ಮೇಲ್ಕಂಡ ವಿಷಯವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗಂಭೀರವಾಗಿ ಪರಿಗಣಿಸಿ ಶಾಲಾ ಮಕ್ಕಳಿಗೆ ಆಧಾರ್ ಕಾರ್ಡ್‌ನ ವಿತರಣೆ ಆಗಿರುವ ಹಾಗೂ ಆಧಾರ್ ಕಾರ್ಡ್‌ನ ಹೊಸ ನೋಂದಣಿಗಾಗಿ ಕಾಯುತ್ತಿರುವ ಮಕ್ಕಳ ಬಗ್ಗೆ ಪರಿಶೀಲಿಸಿ ಈಗಾಗಲೇ ಲಭ್ಯವಿರುವ ಮಕ್ಕಳ ಆಧಾರ ಸಂಖ್ಯೆಯನ್ನು ಶಾಲಾ ಮಟ್ಟದಿಂದ ಜಿಲ್ಲಾ ಮಟ್ಟದವರೆವಿಗೂ ಕ್ರೋಢೀಕರಿಸಿ ಸರ್ಕಾರಕ್ಕೆ ವರದಿ ಮಾಡಲು ಸೂಚಿಸಿದ್ದಾರೆ.
- ❖ ಮೇಲೆ ಹೇಳಿದ ಕ್ರೋಢೀಕೃತ ಮಾಹಿತಿಯನ್ನು ದಿನಾಂಕ: **05.11.2015** ರೊಳಗೆ ಪ್ರತಿ ಶಾಲೆಯಿಂದ ಕೆಳಕಂಡ ಮೂರು ನಮೂನೆಗಳಲ್ಲಿ ಮಾಹಿತಿ ಸಂಗ್ರಹಿಸಿ ಕಳುಹಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

1. ಈಗಾಗಲೇ ಆಧಾರ್ ಕಾರ್ಡ್ ಹೊಂದಿರುವ ಮಕ್ಕಳಿಂದ 12 ಅಂಕಿಗಳುಳ್ಳ ಆಧಾರ್ ಸಂಖ್ಯೆಯನ್ನು ಪಡೆಯುವುದು.
   (ಈಗಾಗಲೇ ಆಧಾರ್ ಸಂಖ್ಯೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ವರದಿ ಮಾಡಿರುವ ಮಕ್ಕಳನ್ನು ಹೊರತುಪಡಿಸಿ) (ಅನುಬಂಧ-1 ರಂತೆ)
2. ಆಧಾರ್ ನೋಂದಣಿ ಮಾಡಿಸಿದ್ದು ತಾತ್ಕಾಲಿಕವಾಗಿ 14 ಅಂಕಿಗಳುಳ್ಳ ಆಧಾರ್ ಸ್ವೀಕೃತಿ ಪತ್ರವನ್ನು (Aadhar Acknowledgement) ಪಡೆದಿರುವ ಮಕ್ಕಳ ಮಾಹಿತಿಯನ್ನು ಪಡೆದು ಜಿಲ್ಲಾ ಆಧಾರ್ ನೋಡಲ್ ಅಧಿಕಾರಿಗಳಿಗೆ ನೀಡಿ ಸದರಿಯವರಿಂದ **12 ಅಂಕಿಗಳುಳ್ಳ ಹೊಸ ಆಧಾರ್ ಸಂಖ್ಯೆಯನ್ನು** ಪಡೆಯುವುದು (ಅನುಬಂಧ -2 ರಂತೆ)
3. ಆಧಾರ್ ನೋಂದಣಿ ಮಾಡಿಸಿಲ್ಲದ ಹಾಗೂ ಆಧಾರ್ ಕಾರ್ಡ್ ಸಂಖ್ಯೆ ಹೊಂದಿಲ್ಲದ ತರಗತಿವಾರು ಮಕ್ಕಳ ಪಟ್ಟಿಯನ್ನು ಪಡೆಯುವುದು (ಅನುಬಂಧ-3 ರಂತೆ)

4. ಮೇಲೆ ಹೇಳಿದ ಪ್ರಮುಖವಾದ 3 ವಿಷಯಗಳನ್ನು ತಮ್ಮ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟು ಸಂಬಂಧಿಸಿದ ಮಾಹಿತಿಯನ್ನು ಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರುಗಳಿಂದ ಪಡೆದು **ದಿನಾಂಕ: 05.11.2015** ರೊಳಗೆ DISE(District Information System for Education) ತತ್ರಾಂಶದಲ್ಲಿ ನಮೂದಿಸುವುದು.
5. ಮೇಲೆ ಹೇಳಿದ ನಮೂನೆ 1 ಹಾಗೂ ನಮೂನೆ 2 ರ ಪ್ರಕಾರ ಕ್ರೋಢೀಕರಿಸಿದ ದತ್ತಾಂಶವನ್ನು ಪಡೆದು ಮಕ್ಕಳ ಆಧಾರ್ ಸಂಖ್ಯೆಯನ್ನು ಗಣಕೀಕರಿಸುವುದು.
6. ಪ್ರತಿ ಹಂತದಲ್ಲಿಯೂ ಜಿಲ್ಲಾ ನೋಡಲ್ ಆಧಾರ್ ಅಧಿಕಾರಿಗಳನ್ನು ಸಂಪರ್ಕಿಸಬೇಕು.
7. ನೋಂದಣಿ ಆಗಿರುವ ಹಾಗೂ ನೋಂದಣಿ ಆಗದಿರುವ ಮಕ್ಕಳ ಮಾಹಿತಿ ಪಡೆದು ಸೂಕ್ತ ಕ್ರಮ ವಹಿಸಬೇಕು. ಈ ಬಗ್ಗೆ ರಾಜ್ಯ ಆಧಾರ್ ನೋಡಲ್ ಅಧಿಕಾರಿಗಳಾದ **ಶ್ರೀ ಟಿ. ಜಯರಾಮು, ಸಹನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ** ರವರ ಇ-ಮೇಲ್ jdprogramme123@gmail.com ವಿಳಾಸಕ್ಕೆ ಮಾಹಿತಿಯನ್ನು ತಪ್ಪದೇ ಕಳುಹಿಸುವುದು
8. ಈಗಾಗಲೇ ಪ್ರತಿಶತ 80ಕ್ಕಿಂತ ಹೆಚ್ಚು ಆಧಾರ್ ದತ್ತಾಂಶ ಕಾರ್ಯವನ್ನು ಪೂರ್ಣಗೊಳಿಸಿರುವ ಉಪನಿರ್ದೇಶಕರುಗಳು ತಮ್ಮ ಜಿಲ್ಲೆಯಲ್ಲಿನ ಮಕ್ಕಳ ಆಧಾರ್ ನೋಂದಣಿ ಕಾರ್ಯಕ್ಕೆ ಈ ಹಿಂದಿನ ಸಭೆಗಳಲ್ಲಿ ಚರ್ಚಿಸಿದಂತೆ ಎಲ್ಲಾ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡು ತಮ್ಮ ಜಿಲ್ಲಾ ಆಧಾರ್ ನೋಡಲ್ ಅಧಿಕಾರಿಗಳ ಸಹಯೋಗದೊಂದಿಗೆ ಆಧಾರ್ ನೋಂದಣಿ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು.
9. **ಯಾವುದೇ ಕಾರಣಕ್ಕೂ ಆಧಾರ್ ಸಂಖ್ಯೆ ಹೊಂದಿಲ್ಲದ ಮಕ್ಕಳಿಂದ ಆಧಾರ್ ಕಾರ್ಡ್ ಮಾಡಿಸಲು ಒತ್ತಾಯ ಮಾಡಬಾರದೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.**
10. **ಆಧಾರ್ ಸಂಖ್ಯೆ ಹೊಂದಿಲ್ಲದ ಹಾಗೂ ನೋಂದಣಿ ಆಗಿಲ್ಲದ ಮಕ್ಕಳಿಗೆ ಶಿಕ್ಷಣ ಇಲಾಖೆ ವತಿಯಿಂದ ಶಾಲೆಗಳಲ್ಲಿಯೇ ಆಧಾರ್ ಕಾರ್ಡ್ ಮಾಡಿಸಲು ಏರ್ಪಾಟು ಮಾಡಲಾಗಿದೆ.**
11. ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಪ್ರತೀ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸಂಬಂಧಿಸಿದ ಶಾಲಾ ಶಿಕ್ಷಕರುಗಳು ಆಧ್ಯಗಮನಹರಿಸಿ ನಿಖರವಾದ ಮಾಹಿತಿಯನ್ನು ಒದಗಿಸಲು ತಮ್ಮ ಹಂತದಿಂದ ಸುತ್ತೋಲೆಯನ್ನು ಈ ಕೂಡಲೇ ಹೊರಡಿಸಿ ಸಂಬಂಧಿಸಿದ ಮಾಹಿತಿಯನ್ನು ದಿನಾಂಕ: 03.11.2015ರ ಒಳಗೆ ನೀಡುವಂತೆ ಸೂಚಿಸುವುದು. ಹಾಗೂ ಮಾಹಿತಿಯನ್ನು ಸಕಾಲದಲ್ಲಿ ನೀಡದಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಶಾಲಾ ಮುಖ್ಯಸ್ಥರ ಮೇಲೆ ಶಿಸ್ತಿನ ಕ್ರಮ ವಹಿಸಲಾಗುವುದೆಂದು ತಿಳಿಸುವುದು.

**ಅನುಬಂಧ-1**

**ಆಧಾರ್ ಸಂಖ್ಯೆಯನ್ನು ಹೊಂದಿರುವ ತರಗತಿವಾರು ಮಕ್ಕಳ ಪಟ್ಟಿ.**

**(ಸರ್ಕಾರಿ/ಅನುದಾನಿತ/ಅನುದಾನರಹಿತ-ಕಿಪ್ರಾ, ಶಾಲೆ/ಹಿ.ಪ್ರಾ, ಶಾಲೆ/ಪ್ರೌಢ ಶಾಲೆ)**

| ಕ್ರ. ಸಂ. | ಬ್ಲಾಕಿನ ಹೆಸರು | ಶಾಲೆಯ ಹೆಸರು | ತರಗತಿ | ಮಕ್ಕಳ ಹೆಸರು | 12 ಅಂಕಿಗಳುಳ್ಳ ಆಧಾರ್ ಕಾರ್ಡ್ ಸಂಖ್ಯೆ |
|---|---|---|---|---|---|
| 1 | | | | | |
| 2 | | | | | |

ಅನುಬಂಧ-2

**ಆಧಾರ್ ನೋಂದಣಿ ಮಾಡಿಸಿದ್ದು ಇನ್ನೂ ಆಧಾರ್ ಕಾರ್ಡ್ ಬಾರದಿರುವ ತರಗತಿವಾರು ಮಕ್ಕಳ ಪಟ್ಟಿ.**
**(ಸರ್ಕಾರಿ/ಅನುದಾನಿತ/ಅನುದಾನರಹಿತ-ಕಿಪ್ರಾ, ಶಾಲೆ/ಹಿ.ಪ್ರಾ, ಶಾಲೆ/ಪ್ರೌಢ ಶಾಲೆ)**

| ಕ್ರ.ಸಂ | ಬ್ಲಾಕಿನ ಹೆಸರು | ಶಾಲೆಯ ಹೆಸರು | ತರಗತಿ | ಮಕ್ಕಳ ಹೆಸರು | 14 ಅಂಕಿಗಳುಳ್ಳ ತಾತ್ಕಾಲಿಕ ಆಧಾರ್ ಕಾರ್ಡ್ ಸಂಖ್ಯೆ (14 digit -Aadhar Acknowledgement number) |
|---|---|---|---|---|---|
| 1 | | | | | |
| 2 | | | | | |

ಅನುಬಂಧ-3

**ಆಧಾರ್ ಕಾರ್ಡ್ ಸಂಖ್ಯೆ ಹೊಂದಿರದ/ನೋಂದಣಿ ಮಾಡಿಸಿಲ್ಲದ ತರಗತಿವಾರು ಮಕ್ಕಳ ಪಟ್ಟಿ.**
**(ಸರ್ಕಾರಿ/ಅನುದಾನಿತ/ಅನುದಾನರಹಿತ-ಕಿಪ್ರಾ, ಶಾಲೆ/ಹಿ.ಪ್ರಾ, ಶಾಲೆ/ಪ್ರೌಢ ಶಾಲೆ)**

| ಕ್ರ.ಸಂ | ಬ್ಲಾಕಿನ ಹೆಸರು | ಶಾಲೆಯ ಹೆಸರು | ತರಗತಿ | ಮಕ್ಕಳ ಹೆಸರು | ಷರಾ |
|---|---|---|---|---|---|
| 1 | | | | | |
| 2 | | | | | |

ರಾಜ್ಯ ಯೋಜನಾ ನಿರ್ದೇಶಕರು
ಸರ್ವಶಿಕ್ಷಣ ಅಭಿಯಾನ
ಬೆಂಗಳೂರು

31/X/15
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

***ಇವರಿಗೆ,***

ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ

**ಪ್ರತಿಯನ್ನು**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)
2. ಅಪರ ಆಯುಕ್ತರು, ಧಾರವಾಡ ಮತ್ತು ಕಲಬುರುಗಿ, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಶ್ರೀ.ಟಿ.ಜಯರಾಮು, ಸಹನಿರ್ದೇಶಕರು(ಕಾ/ಗು), ಸ,ಶಿಅ, ಹಾಗೂ ರಾಜ್ಯ ಮಟ್ಟದ ನೋಡಲ್ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ.
4. ಕಛೇರಿ ಪ್ರತಿ